**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.2/2015**

**ಪಿಡಬ್ಲ್ಯೂ-6**

**ಸಿಡಬ್ಲ್ಯೂ-9**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಹೇಶಾ ಬಿ ಜಿ |
| ತಂದೆಯ ಹೆಸರು | - | ಗಣೇಶಾಚಾರಿ |
| ವಯಸ್ಸು | - | 38 |
| ಕೆಲಸ | - | ಪೋಲಿಸ್ ಇನ್ಸಪೆಕ್ಟರ್, ಎ ಸಿ ಬಿ, ಮಡಿಕೇರಿ |
| ವಾಸ | - | ಮಡಿಕೇರಿ |

**ದಿನಾಂಕ 08-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ದಿಃ 09.09.2012 ರಿಂದ ದಿಃ05.05.2015 ವರೆಗೆ ಸಾಲಿಗ್ರಾಮ ಪೋಲೀಸ್ ಠಾಣೆಯಲ್ಲಿ ಸಬ್ ಇನ್ಸಪೆಕ್ಟರ್ ಆಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ24.11.2014 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ 8 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನದಂದು ಅಂಕನಹಳ್ಳಿ ಗ್ರಾಮ ಪಂಚಾಯತಿಯವರಿಂದ ಚಾಸಾ 1 ರವರಿಗೆ ಸಂಬಂದಪಟ್ಟ ಮನೆಯ ಅಸೆಸ್ ಮಂಟ್ ರಿಜಿಸ್ಟರ್ನ ದೃಡಿಕೃತ ದಾಖಲೆಯನ್ನು ಪಡೆದಿರುತ್ತೇನೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ನಂತರ ತನಿಖೆಯಿಂದ ಆರೋಪಿಗಳ ವಿರುದ್ದ ಆರೋಪಿ ಖಚಿತಗೊಂಡ ನಂತರ ದಿಃ25.11.2014 ರಂದು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು: ಶ್ರೀ. ಜಿ ಪಿ (ಎಸ್ ಎಸ್ ಆರ್) ವಕೀಲರಿಂದ 1 ರಿಂದ 10 ನೇ ಆರೋಪಿ ಪರ ವಕೀಲರುಃ**

ನಾನು ಪಡೆದಿರುವ ನಿಪಿ 4 ದಾಖಲೆ ಚಾಸಾ 1 ರವರ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ತನ್ನ ಹೇಳಿಕೆಯಲ್ಲಿ ಸದರಿ ದಾಖಲೆಗೆ ಸಂಬಂದಪಟ್ಟ ಮನೆ ತನ್ನ ತಂದೆಯ ಹೆಸರಿನಲ್ಲಿ ಇರುವ ಬಗ್ಗೆ ಹೇಳಿಕೆ ನೀಡಿರುವ ಮೇರೆಗೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ.

ಸದರಿ ದಾಖಲೆ ಚಾಸಾ 1 ರವರ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಾಸಾ 1 ರವರ ತಂದೆಯ ಹೆಸರಿನಲ್ಲಿ ಇರುವುದು ಕಂಡು ಬಂದಿರುತ್ತದೆ. ಚಾಸಾ 1 ರವರ ತಂದೆ ಈ ಪ್ರಕರಣದ ಪಿರ್ಯಾದುದಾರರಾಗಿರುವುದಿಲ್ಲ ಎಂದರೆ ಸರಿ.

ನಾನು ನಿಪಿ 4 ನ್ನು ದಿ:24.11.2014 ರಂದು ಪಡೆದಿರುತ್ತೇನೆ. ಅದೇ ರೀತಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ದಿ:25.11.2014 ರಂದು ಸಲ್ಲಿಸಿರುತ್ತೇನೆ. ನಾನು ಸದರಿ ಪ್ರಕರಣದಲ್ಲಿ ಸತ್ಯಾಸತ್ಯತೆಯನ್ನು ಪರಿಶೀಲಿಸದೇ ಹಾಗೂ ಯಾವುದೇ ರೀತಿಯ ತನಿಖೆಯನ್ನು ನಡೆಸದೇ ಸುಳ್ಳು ದೋಷಾರೋಪಣ ಪಟ್ಟಿಯನ್ನು ಆರೋಪಿಗಳ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸದರಿ ಆರೋಪಿಗಳ ವಿರುದ್ದ ಇನ್ನು 4-5 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ದಾಖಲಾತಿಗಳನ್ನು ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದುದಾರರವರ ಮಾತು ಕೇಳಿ ಹಾಗೂ ರಾಜಕೀಯ ಒತ್ತಡದಿಂದ ಆರೋಪಿಗಳ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ